# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಆಗಸ್ಟ್ 04, 2021

ಸಂಪುಟ : 48 ಸಂಚಿಕೆ : 82 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com





ಬರಲು ಸಿದ್ಧವಾಗುತ್ತಿರುವ ಗಣಪ

ಬರುವ ಸೆಪ್ಟಂಬರ್ ತಿಂಗಳು ನಡೆಯಲಿರುವ ಗಣೇಶ ಚತುರ್ಥಿಗಾಗಿ ಗಣೇಶನ ವಿಗ್ರಹಗಳ ತಯಾರಿಕೆಯ ಕಾರ್ಯ ಚುರುಕಿನಿಂದ ನಡೆಯುತ್ತಿದೆ. ದಾವಣಗೆರೆಯ ಕಾಯಿಪೇಟೆ ಬಳಿ ರಾಮಚಂದ್ರರಾವ್ ಎಂಬುವವರು ಮಣ್ಣಿನ ವಿಗ್ರಹ ತಯಾರಿಸುತ್ತಿರುವುದು.

# ಇಂದು ಸಂಪುಟ ವಿಸ್ತರಣೆ

## ಉಪ ಮುಖ್ಯಮಂತ್ರಿ ಸ್ಥಾನಗಳ ಬಗ್ಗೆ ಇನ್ನೂ ನಿರ್ಧಾರವಿಲ್ಲ



ನವದೆಹಲಿ, ಆ. 3 – ಬುಧವಾರ ಮಧ್ಯಾಹ್ನ ಇಲ್ಲವೇ ಸಂಜೆ ತಮ್ಮ ನೂತನ ಸರ್ಕಾರದ ಸಂಪುಟ ವಿಸ್ತರಣೆ ನೆರವೇರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಭೇಟಿ ನಂತರ ಪತ್ರಕರ್ತರ ಜೊತೆ ಮಾತನಾಡಿರುವ ಅವರು, ಉಪ ಮುಖ್ಯಮಂತ್ರಿ ಹಾಗೂ 2-3 ಸಂಪುಟ ಸದಸ್ಯರ ಸಂಖ್ಯೆ ಹೊರತು ಪಡಿಸಿ ಬಹುತೇಕ ವಿಷಯಗಳು ಅಂತಿಮವಾಗಿವೆ ಎಂದು ತಿಳಿಸಿದ್ದಾರೆ.

ಉಪಮುಖ್ಯಮಂತ್ರಿ ಸ್ಥಾನಗಳು ಬೇಕು ಎಂದು ಬೊಮ್ಮಾಯಿ ಹೈಕಮಾಂಡ್ ಬಳಿ ತಿಳಿಸಿದ್ದಾರೆ. ಆದರೆ, ಹೈಕಮಾಂಡ್ ಉಪ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಒಲವು ತೋರಿಲ್ಲ ಎನ್ನಲಾಗುತ್ತಿದೆ. ಅಲ್ಲದೇ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಸಂಪುಟ ಸೇರ್ಪಡೆ ಬಗ್ಗೆಯೂ ಹೈಕಮಾಂಡ್ ಒಲವು ಹೊಂದಿಲ್ಲ ಎನ್ನಲಾಗುತ್ತಿದೆ.

ಉಪ ಮುಖ್ಯಮಂತ್ರಿ ಸ್ಥಾನದ ಕುರಿತು ಎರಡು ಅಭಿಪ್ರಾಯ ಇರುವುದು ನಿಜ ಎಂದು ಒಪ್ಪಿಕೊಂಡಿರುವ ಬೊಮ್ಮಾಯಿ, ಈ ಬಗ್ಗೆ ಹೈಕಮಾಂಡ್ ನಿರ್ಧಾರ ತಿಳಿಸಲಿದೆ ಎಂದಿದ್ದಾರೆ.

ನಾನು ನಾಳೆ ಬುಧವಾರ ಬೆಳಿಗ್ಗೆ 6.10ಕ್ಕೆ ಬೆಂಗಳೂರಿಗೆ ತೆರಳುತ್ತೇನೆ. ದೂರವಾಣಿ ಮೂಲಕ ವರಿಷ್ಠರು ಅಂತಿಮ ಪಟ್ಟಿಯ ಬಗ್ಗೆ ತಿಳಿಸಲಿದ್ದಾರೆ. ಮಧ್ಯಾಹ್ನ ಇಲ್ಲವೇ ಸಂಜೆ ಒಳ್ಳೆ ಸಮಯ ನೋಡಿ ಪ್ರಮಾಣ ವಚನ ನೆರವೇರಿಸಲು ಚಿಂತನೆ ಮಾಡಿದ್ದೇನೆ ಎಂದವರು ಹೇಳಿದ್ದಾರೆ.

ಯಡಿಯೂರಪ್ಪ ಪುತ್ರ ವಿಜಯೇಂದ್ರಗೆ ಸಚಿವ ಸ್ಥಾನ ನೀಡುವ ಕುರಿತು ವರಿಷ್ಠರು ಏನೂ ತಿಳಿಸಿಲ್ಲ. ನಾಳೆ ಯಡಿಯೂರಪ್ಪ ಜೊತೆ ವರಿಷ್ಠರ ಮಾತುಕತೆ ನೆರವೇರಲಿದೆ ಎಂದವರು ಹೇಳಿದ್ದಾರೆ.

ಎರಡು ಹಂತಗಳಲ್ಲಿ ಸಂಪುಟ ರಚನೆಯಾಗಲಿದೆ ಎಂಬ ಇಂಗಿತ ವ್ಯಕ್ತಪಡಿಸಿರುವ ಬೊಮ್ಮಾಯಿ, ಸಂಪುಟಕ್ಕೆ (3ನೇ ಪುಟಕ್ಕೆ)

## ಬಿಜೆಪಿ ವರಿಷ್ಠರಿಗೂ- ಸಿಎಂ ಬೊಮ್ಮಾಯಿಗೂ ವಿಜಯೇಂದ್ರ ಬಿಸಿ ತುಪ್ಪ

ಬೆಂಗಳೂರು, ಆ. 3- ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ. ವೈ.ವಿಜಯೇಂದ್ರ ಅವರನ್ನು ಮಂತ್ರಿ ಮಂಡಲಕ್ಕೆ ಸೇರ್ಪಡೆ ಮಾಡಿಕೊಳ್ಳುವ ವಿಷಯದಿಂದಾಗಿ ಸಂಪುಟ ರಚನೆ ಕಗ್ಗಂಟಾಗಿದೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿ ಸಂಪುಟ ರಚನೆಗೆ ಇನ್ನಿಲ್ಲದ ಕಸರತ್ತು ನಡೆಸಿದರೂ ವಿಜಯೇಂದ್ರ, ವರಿಷ್ಠರು ಮತ್ತು ಮುಖ್ಯಮಂತ್ರಿ ನಡುವೆ ಬಿಸಿ ತುಪ್ಪವಾಗಿದ್ದಾರೆ.

ಹಳಬರನ್ನು ಒಳಗೊಂಡಂತೆ ಸಂಘ ಪರಿವಾರದ ಹಿನ್ನೆಲೆ ಇರುವ ಹೊಸಬರನ್ನು ಸೇರಿಸಿಕೊಂಡು ಮೊದಲ (3ನೇ ಪುಟಕ್ಕೆ)

## ಬ್ಯಾಟರಿ ಚಾಲಿತ ವಾಹನ ನೋಂದಣಿ ಶುಲ್ಕ ವಿನಾಯಿತಿ

ನವದೆಹಲಿ ಆ. 3 – ಬ್ಯಾಟರಿ ಚಾಲಿತ ವಾಹನಗಳ ನೋಂದಣಿ ಹಾಗೂ ನವೀಕರಣಕ್ಕೆ ಶುಲ್ಕ ವಿನಾಯಿತಿ ನೀಡುವ ಅಧಿಸೂಚನೆಯನ್ನು ಕೇಂದ್ರ ಸಾರಿಗೆ ಸಚಿವಾಲಯ ಪ್ರಕಟಿಸಿದೆ.

ಸರ್ಕಾರದ ಈ ಕ್ರಮದಿಂದ ಬ್ಯಾಟರಿ ಚಾಲಿತ ವಾಹನಗಳಿಗೆ ಇನ್ನಷ್ಟು ಉತ್ತೇಜನ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## 12 ಪಾಸಿಟಿವ್ 69 ಗುಣಮುಖ

ದಾವಣಗೆರೆ, ಆ.3- ಜಿಲ್ಲೆಯಲ್ಲಿ ಬುಧವಾರ 12 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 69 ಜನ ಗುಣಮುಖರಾದ ಬಗ್ಗೆ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸ ಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 4, ಹರಿಹರ 1, ಜಗಳೂರು 1, ಚನ್ನ ಗಿರಿ 3, ಹೊನ್ನಾಳಿ 1 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 260 ಸಕ್ರಿಯ ಪ್ರಕರಣಗಳಿವೆ.

## ಸಕ್ರಿಯ ಸೋಂಕಿತರ ಸಂಖ್ಯೆ ಇಳಿಕೆ

ನವದೆಹಲಿ, ಆ. 3 - ದೇಶದಲ್ಲಿ ಮಂಗಳವಾರ 30,549 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಆರು ದಿನಗಳ ನಂತರ ಸಕ್ರಿಯ ಸೋಂಕಿತರ ಸಂಖ್ಯೆಯಲ್ಲಿ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ (2ನೇ ಪುಟಕ್ಕೆ)

### ಭದ್ರಾ ಜಲಾಶಯ

ಇಂದಿನ ಮಟ್ಟ : 182 ಅಡಿ 11 ಇಂಚು
ಒಳ ಹರಿವು: 6083 ಕ್ಯೂಸೆಕ್ಸ್
ಹೊರ ಹರಿವು : 3144 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 153.9 ಅಡಿ

# ಆ.15ರ ಒಳಗೆ ಆಕ್ಸಿಜನ್ ಘಟಕಗಳಿಗೆ ಚಾಲನೆ

## ಸಿ.ಜಿ. ಆಸ್ಪತ್ರೆಯಲ್ಲಿ 3,000 ಲೀಟರ್ ಸಾಮರ್ಥ್ಯದ ಮೂರು ಘಟಕಗಳು: ಬೀಳಗಿ

ದಾವಣಗೆರೆ, ಆ 2 - ಬರುವ ಆಗಸ್ಟ್ 15ರ ಒಳಗೆ ಜಿಲ್ಲಾದ್ಯಂತದ ಸರ್ಕಾರಿ ಆಸ್ಪತ್ರೆಗಳಲ್ಲಿ ಇರುವ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ಚಾಲನೆಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ಭೇಟಿ ನೀಡಿ ವಿವಿಧ ಕಾಮಗಾರಿಗಳ ಪರಿಶೀಲನೆ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಚಿಗಟೇರಿ ಆಸ್ಪತ್ರೆಯಲ್ಲಿ ಪ್ರತಿ ನಿಮಿಷಕ್ಕೆ 3,000 ಲೀಟರ್ ಆಕ್ಸಿಜನ್ ಉತ್ಪಾದಿಸುವ ಒಟ್ಟು ಮೂರು ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಇದರ ಜೊತೆಗೆ ಮಕ್ಕಳ ಐ.ಸಿ.ಯು. ಘಟಕವನ್ನೂ ಸಿದ್ಧ ಪಡಿಸಲಾಗುತ್ತಿದೆ. ಇವೆರಡೂ ಆಗಸ್ಟ್ 15ರ ಒಳಗೆ ಸಿದ್ಧವಾಗಲಿವೆ ಎಂದರು.

ನಿಮಿಷಕ್ಕೆ 2,000 ಲೀಟರ್ ಆಕ್ಸಿಜನ್ ಉತ್ಪಾದಿಸುವ ಎರಡು ಘಟಕಗಳನ್ನು ಪಿಎಂ ಕೇರ್ಸ್ ನಿಧಿಯಿಂದ ಒದಗಿಸಲಾಗಿದೆ. ಇನ್ನೊಂದನ್ನು ಪೆಟ್ರೋನೆಟ್ ಕಂಪನಿ ಪೂರೈಸಿದೆ. ಇದರ ಜೊತೆಗೆ ಇಎಸ್ಐ ಆಸ್ಪತ್ರೆಯಲ್ಲಿ 500 ಲೀಟರ್ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆಯಾಗುತ್ತಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಕೊರೊನಾ ಮೂರನೇ ಅಲೆ ಎದುರಿಸಲು ಜಿಲ್ಲಾದ್ಯಂತ ಅಗತ್ಯ ಮಾನವ ಸಂಪನ್ಮೂಲ, ವೈದ್ಯಕೀಯ ಉಪಕರಣ ಹಾಗೂ ಸೌಲಭ್ಯಗಳನ್ನು ಉನ್ನತೀಕರಣ ಮಾಡ ಲಾಗುತ್ತಿದೆ. ಆಕ್ಸಿಜನ್ ಘಟಕಗಳಿಗೆ ಬೇಕಾದ ಜನರೇಟರ್, ಟ್ರಾನ್ಸ್‌ಫಾರ್ಮರ್ (2ನೇ ಪುಟಕ್ಕೆ)



### ಅರ್ಧ ಹೆಲ್ಮೆಟ್ ಮಾರುವವರಿಗೆ ನೋಟಿಸ್

ಐಎಸ್ಐ ಗುರುತು ಇಲ್ಲದ ಹಾಗೂ ಅರ್ಧ ಹೆಲ್ಮೆಟ್‌ಗಳನ್ನು ಮಾರುವವರಿಗೆ ನೋಟಿಸ್ ನೀಡಿ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಲಾಗಿದೆ. ಇದರಿಂದಾಗಿ ಅಂತಹ ಹೆಲ್ಮೆಟ್ ಮಾರಾಟ ನಿಲ್ಲಿಸಲಾಗಿದೆ. ಜನರೂ ಸಹ ಅರ್ಧ ಹೆಲ್ಮೆಟ್ ಬಳಸಬಾರದು ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

ಮಾರುಕಟ್ಟೆಗಳು, ಪಾನಿಪುರಿ ಮುಂತಾದ ತಿನಿಸುಗಳನ್ನು ಮಾರುವ ತಾಣಗಳು, ಮಾಂಸದ ಅಂಗಡಿಗಳು ಸೇರಿದಂತೆ ಹಲವೆಡೆ ಜನಸಂದಣಿ ಉಂಟಾಗುತ್ತಿದೆ. ಜನಸಂದಣಿ ತಡೆಯಲು ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದರು.

ಜಾತ್ರೆ - ಉತ್ಸವಗಳಿಗೆ ಅವಕಾಶವಿಲ್ಲ. ಮಠಗಳಲ್ಲಿ ನಡೆಯುವ ಕಾರ್ಯಕ್ರಮಗಳೂ ಕೊವಿಡ್ ನಿಯಮಗಳಂತೆ ಸಾಮಾಜಿಕ ಅಂತರದಲ್ಲಿ ನಡೆಯಬೇಕು ಎಂದವರು ತಿಳಿಸಿದರು.

# ವಾರಾಂತ್ಯ ದಿನಗಳಲ್ಲಿ ದೇಗುಲ ಪ್ರವೇಶಕ್ಕೆ ಅವಕಾಶವಿಲ್ಲ: ಡಿಸಿ

ದಾವಣಗೆರೆ, ಆ.3- ಕೋವಿಡ್-19 ಸಂಭಾವ್ಯ ಮೂರನೇ ಅಲೆ ನಿರ್ವಹಿಸುವ ನಿಟ್ಟಿನಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಆ.31 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಜಿಲ್ಲೆಯ ಎಲ್ಲಾ ಮುಜರಾಯಿ ದೇವಾಲಯಗಳು ಮತ್ತು ಖಾಸಗಿ ದೇವಾಲಯಗಳಲ್ಲಿ ದೇವರ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಿಕೊಡಲಾಗಿದ್ದು, ಶನಿವಾರ ಮತ್ತು ಭಾನುವಾರಗಳಂದು ಭಕ್ತಾದಿಗಳ ದೇಗುಲ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಆದೇಶ ಹೊರಡಿಸಿದ್ದಾರೆ.

ಭಕ್ತಾದಿಗಳಿಗೆ ದೇವಾಲಯದ ಪ್ರವೇಶ ಹಾಗೂ ದೇವರ ದರ್ಶನಕ್ಕೆ ಮಾತ್ರ ಅವಕಾಶ ನೀಡಿದ್ದು ಉತ್ಸವ, ಸೇವೆ, ಮಡಿ, ಪ್ರಸಾದ, ದಾಸೋಹ ಇತ್ಯಾದಿಗಳನ್ನು ನಿಷೇಧಿಸಿದೆ. ಶನಿವಾರ ಮತ್ತು ಭಾನುವಾರಗಳಂದು ಅರ್ಚಕರುಗಳಿಂದ ಸಾಂಪ್ರಾದಾಯಿಕ ಪೂಜೆಗೆ ಮಾತ್ರ ಅವಕಾಶ ಕಲ್ಪಿಸಿ, ಭಕ್ತಾದಿಗಳ ಪ್ರವೇಶವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

### ರಾತ್ರಿ ಕರ್ಫ್ಯೂ: ಕಟ್ಟು ನಿಟ್ಟಿನ ಜಾರಿ

ಪ್ರತಿದಿನ ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ಹಾಗೂ ದೇವಾಲಯಗಳಲ್ಲಿ ಜನಸಂದಣಿ ನಿಯಂತ್ರಣವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸ್ಥಳೀಯ ಪ್ರಾಧಿಕಾರಿಗಳು ಜನಸಂದಣಿ ತಡೆಯಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಿದೆ.


ಅಗತ್ಯವಾದರೆ ಪ್ರತಿನಿತ್ಯ ಸ್ವತಃ ಎಸ್ಪಿ ಜೊತೆ ಸೇರಿ ಅಭಿಯಾನ ನಡೆಸುವುದಾಗಿ ಅವರು ಹೇಳಿದರು.

## ಭ್ರಷ್ಟಾಚಾರ : ಬಿಎಸ್‌ವೈ, ಪುತ್ರನಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು, ಆ. 3 - ವಸತಿ ಯೋಜನೆಯೊಂದರಲ್ಲಿ ಭ್ರಷ್ಟಾಚಾರ ನಡೆದ ಆರೋಪಗಳಿಗೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಪುತ್ರ ಹಾಗೂ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಅವರ ಕುಟುಂಬದ ಸದಸ್ಯರು, ಮಾಜಿ ಸಚಿವ ಎಸ್.ಟಿ. ಸೋಮಶೇಖರ್ ಹಾಗೂ ಐಎಎಸ್ ಅಧಿಕಾರಿಯೊಬ್ಬರಿಗೆ ರಾಜ್ಯ ಹೈಕೋರ್ಟ್ ನೋಟಿಸ್ ಕಳಿಸಿದೆ.

ಎಸ್. ಸುನಿಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನೋಟಿಸ್ ಕಳಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯ ಜುಲೈ 8ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಕಾರ್ಯಕರ್ತ ಟಿ.ಜೆ. ಅಬ್ರಾಹಂ ದಾಖಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ (2ನೇ ಪುಟಕ್ಕೆ)

## ಜಿಲ್ಲಾ ಕುರುಬರ ಸಂಘದ ಹಂಗಾಮಿ ಅಧ್ಯಕ್ಷರಾಗಿ ಕೊಕ್ಕನೂರು ದ್ಯಾಮಣ್ಣ



ದಾವಣಗೆರೆ, ಆ.3- ದಾವಣಗೆರೆ ಜಿಲ್ಲಾ ಕುರುಬರ ಸಂಘದ ಹಂಗಾಮಿ ಅಧ್ಯಕ್ಷರಾಗಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆಗಿರುವ ಕುರುಬ ಸಮಾಜದ ಹಿರಿಯ ಮುಖಂಡ ಕೊಕ್ಕನೂರು ದ್ಯಾಮಣ್ಣ ಆಯ್ಕೆಯಾಗಿದ್ದಾರೆ.

ಕುರುಬರ ಸಂಘದ ಜಿಲ್ಲಾಧ್ಯಕ್ಷರಾಗಿದ್ದ ಕೆಂಗೋ ಹನುಮಂತಪ್ಪ ಅವರ ನಿಧನದ ಹಿನ್ನೆಲೆಯಲ್ಲಿ ಸಮಾಜದ ಕಚೇರಿಯಲ್ಲಿ ನಿನ್ನೆ ನಡೆದ ಸಂಘದ ಸಭೆಯಲ್ಲಿ ಈ ಆಯ್ಕೆ ನಡೆಯಿತು ಎಂದು ಪ್ರಧಾನ ಕಾರ್ಯದರ್ಶಿಯೂ ಆಗಿರುವ ಹಿರಿಯ ವಕೀಲ ಲೋಕಿಕೆರೆ ಸಿದ್ದಪ್ಪ ತಿಳಿಸಿದ್ದಾರೆ.

## ಸಿಬಿಎಸ್ಸಿ 10ನೇ ತರಗತಿ ಶೇ. 99.04 ಫಲಿತಾಂಶ

ನವದೆಹಲಿ, ಜು. 30 - ಸಿ.ಬಿ.ಎಸ್.ಇ. ಹತ್ತನೇ ತರಗತಿ ಪರೀಕ್ಷೆ ಫಲಿತಾಂಶ ಪ್ರಕಟಿಸಲಾಗಿದ್ದು, ಶೇ.99.04ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಕಳೆದ ವರ್ಷ ಶೇ.91.46ರಷ್ಟು ಫಲಿತಾಂಶ ದೊರೆತಿತ್ತು. ಈ ವರ್ಷ ಶೇ.7ರಷ್ಟು ಫಲಿತಾಂಶ ಏರಿಕೆಯಾಗಿದೆ. ಬಾಲಕಿಯರ ಉತ್ತೀರ್ಣ ಪ್ರಮಾಣ ಶೇ.99.24 ಹಾಗೂ ಬಾಲಕರ ಉತ್ತೀರ್ಣ ಪ್ರಮಾಣ ಶೇ.98.89ರಷ್ಟಿದೆ. ತೃತೀಯ ಲಿಂಗಿಗಳು ಶೇ.100ರಷ್ಟು ಪ್ರಮಾಣದಲ್ಲಿ ಉತ್ತೀರ್ಣರಾಗಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ರದ್ದುಗೊಳಿಸಲಾಗಿತ್ತು. ಪರ್ಯಾಯ ಮೌಲ್ಯಮಾಪನ ಮಾನದಂಡಗಳ ಮೂಲಕ ಫಲಿತಾಂಶ ಪ್ರಕಟಿಸಲಾಗಿದೆ. ಕೇಂದ್ರೀಯ (3ನೇ ಪುಟಕ್ಕೆ)

## ವಾರಾಂತ್ಯದ ಕರ್ಫ್ಯೂಗೆ ತಜ್ಞರ ಸಮಿತಿ ಸಲಹೆ

ಬೆಂಗಳೂರು, ಆ. 3- ಕೊರೊನಾ 3ನೇ ಅಲೆ ತಪ್ಪಿಸಲು ವಾರಾಂತ್ಯ ಕರ್ಫ್ಯೂ ಅನ್ನು ಮರು ಜಾರಿಗೊಳಿಸಿ ರಾತ್ರಿ ಕರ್ಫ್ಯೂವನ್ನು ಬಿಗಿಗೊಳಿಸುವಂತೆ ತಜ್ಞರ ಸಮಿತಿ ಸರ್ಕಾರಕ್ಕೆ ಸಲಹೆ ಮಾಡಿದೆ.

ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಶೇ.2ಕ್ಕಿಂತ ಹೆಚ್ಚಿನ ಸೋಂಕಿನ ಪ್ರಮಾಣ ಕಂಡುಬಂದಲ್ಲಿ ತಕ್ಷಣವೇ ಕರ್ಫ್ಯೂ ಜಾರಿಗೊಳಿಸುವಂತೆ ಶಿಫಾರಸ್ಸು ಮಾಡಿದೆ.

ಮಾಸಾಂತ್ಯಕ್ಕೆ ಮೂರನೇ ಅಲೆ ರಾಜ್ಯ ಪ್ರವೇಶಿಸಬಹುದು. ಈಗಾಗಲೇ, ನಮ್ಮ ನೆರೆಯ ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಸೋಂಕು ವ್ಯಾಪಕವಾಗಿ ಹರಡುತ್ತಿದೆ. ಮುನ್ನೆಚ್ಚರಿಕೆಯಾಗಿ ಗಡಿಗಳಲ್ಲಿ ಬಿಗಿ ಕ್ರಮ (3ನೇ ಪುಟಕ್ಕೆ)

# ಬಾಕಿ ವೇತನ ಪಾವತಿಸಲು ಒತ್ತಾಯ



### ಹರಿಹರದಲ್ಲಿ ಬಿಸಿಯೂಟ ತಯಾರಕರ ಪ್ರತಿಭಟನೆ

ಹರಿಹರ, ಆ.3- ಬಿಸಿಯೂಟ ತಯಾರಿಕರಿಗೆ ಕೂಡಲೇ ಜೂನ್ ಮತ್ತು ಜುಲೈ ತಿಂಗಳ ವೇತನವನ್ನು ನೀಡುವುದರ ಜೊತೆಗೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಎಐಟಿಯುಸಿ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಶನ್ ವತಿಯಿಂದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರಿಗೆ ಮನವಿ ಅರ್ಪಿಸಿದರು.

ಈ ವೇಳೆ ಮಾತನಾಡಿದ ಎಐಟಿಯುಸಿ ಜಿಲ್ಲಾಧ್ಯಕ್ಷ ಆವರಗೆರೆ ಚಂದ್ರು ಮಾತನಾಡಿ, ರಾಜ್ಯದಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯಡಿಯಲ್ಲಿ ಅನುದಾನಿತ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಬಿಸಿಯೂಟ ತಯಾರಕರಾಗಿ ಕೆಲಸ ನಿರ್ವಹಿಸುತ್ತಿರುವ ಅಡುಗೆಯವರಿಗೆ ಸರ್ಕಾರ ಮುಖ್ಯ ಅಡುಗೆಯವರಿಗೆ 2700 ಮತ್ತು ಸಹಾಯಕ ಅಡುಗೆಯವರಿಗೆ 2600 ರೂಪಾಯಿ ನೀಡಲಾಗುತ್ತಿದೆ.

ಬೆಲೆ ಏರಿಕೆಯಿಂದಾಗಿ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟವಾಗಿದೆ. ಅವರುಗಳ ವೇತನ ಹೆಚ್ಚಿಸುವ ಮೂಲಕ ಕಳೆದ ಜೂನ್ ಮತ್ತು ಜುಲೈ ತಿಂಗಳ ಬಾಕಿ ವೇತನವನ್ನು ನೀಡುವಂತೆ ಮನವಿ ಮಾಡಿದರು.

ಉತ್ತರ ಪ್ರದೇಶದ ಅಲಹಾಬಾದ್ (3ನೇ ಪುಟಕ್ಕೆ)

## ರೇವಣ್ಣ ಜೊತೆ ಬಿಜೆಪಿ ನಾಯಕರ ಚರ್ಚೆ

ಬೆಂಗಳೂರು, ಆ. 3- ಸಚಿವ ಸಂಪುಟ ರಚನೆಯ ಕಸರತ್ತು ನಡೆಯುತ್ತಿರುವ ಬೆನ್ನಲ್ಲೇ ಬಿಜೆಪಿ ವರಿಷ್ಠರು, ಜೆಡಿಎಸ್‌ನ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಹೆಚ್. ಡಿ.ರೇವಣ್ಣ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದಾರೆ.

### ದೆಹಲಿಗೆ ತೆರಳಿದ ರೇವಣ್ಣ

ಸರ್ಕಾರದಿಂದ ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ದೂರ ಉಳಿದಿರುವುದರಿಂದ ರೇವಣ್ಣ ಅವರ ಮೂಲಕ ಬಿಜೆಪಿ ರಾಜಕೀಯ ದಾಳ ಉರುಳಿಸಿದೆ.

ಹಾಸನದಲ್ಲಿದ್ದ ರೇವಣ್ಣ ಅವರನ್ನು ದೆಹಲಿಯಲ್ಲಿರುವ ಬಿಜೆಪಿಯ ಹಿರಿಯ ನಾಯಕರೊಬ್ಬರು ಸಂಪರ್ಕ ಮಾಡಿ ತುರ್ತಾಗಿ ದೆಹಲಿಗೆ ಬರುವಂತೆ ಸಂದೇಶ ರವಾನಿಸಿದ್ದರು.

ಅವರ ಕರೆಗೆ ಓಗೊಟ್ಟ ರೇವಣ್ಣ ಮುಂಜಾನೆಯೇ ನಗರಕ್ಕೆ ಆಗಮಿಸಿ ಬೆಳಗ್ಗೆ 11 ಗಂಟೆಗೆ ದೆಹಲಿಗೆ ತೆರಳಿದ್ದಾರೆ.

ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕೂ ಮುನ್ನ ಸಂಘಟನಾ ಕಾರ್ಯದರ್ಶಿ ಸಂತೋಷ್, ರೇವಣ್ಣ ಅವರನ್ನು ದೆಹಲಿಗೆ ಕರೆಸಿಕೊಂಡು ಸಮಾಲೋಚನೆ ನಡೆಸಿದ್ದರು. (2ನೇ ಪುಟಕ್ಕೆ)

# ಸರ್ಕಾರ ಬಡವರ ಹಿತವನ್ನು ರಕ್ಷಿಸಲಿ

## ಕಟ್ಟಡ ಕಾರ್ಮಿಕರಿಗೆ ಫುಡ್‌ಕಿಟ್ ವಿತರಿಸಿದ ಎಸ್ಸೆಸ್

ದಾವಣಗೆರೆ, ಆ.3- ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯಿಂದ ಕಟ್ಟಡ ಕಾರ್ಮಿ ಕರಿಗೆ ಫುಡ್‌ಕಿ ಟ್‌ಗಳನ್ನು ನೀಡಲಾಗಿದ್ದು, ಮಂಗಳವಾರ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶಾಮನೂರು ಶಿವಶಂಕರಪ್ಪ ಫುಡ್‌ಕಿಟ್‌ಗಳನ್ನು ವಿತರಿಸಿದರು.

ನಂತರ ಕಟ್ಟಡ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಶಾಸಕರು, ಕಟ್ಟಡ ಕಾರ್ಮಿಕರು ದೇಶ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವಂತಹವರು ಅಂತಹವರ ಸಂಕಷ್ಟಕ್ಕೆ ಸರ್ಕಾರಗಳು ಶೀಘ್ರ ಸ್ಪಂದಿಸುವಂತಾಗಬೇಕು ಎಂದು ಒತ್ತಾಯಿಸಿದರು.

ಕೊರೊನಾ ಒಂದು ಮತ್ತು ಎರಡನೇ ಅಲೆ ವೇಳೆ ಕಟ್ಟಡ ಕಾರ್ಮಿಕರು ಸೇರಿದಂತೆ ಅನೇಕ ವೃತ್ತಿಪರ ಜನರಿಗೆ ಸಾಕಷ್ಟು ತೊಂದರೆಯಾಯಿತು. ಸರ್ಕಾರ ಬಹುದಿನಗಳ ನಂತರ ಸ್ಪಂದಿಸಿದೆ. ಇಷ್ಟಕ್ಕೆ ಸಮಾಧಾನ ಪಟ್ಟುಕೊಳ್ಳಬೇಕೆಂದರು.



ಪ್ರಸ್ತುತ 3ನೇ ಅಲೆ ಆರಂಭವಾಗುವ ಮುನ್ಸೂಚನೆ ಇದ್ದು, ರಾಜ್ಯ ಸರ್ಕಾರ ಕ್ಯಾಬಿನೆಟ್ ರಚನೆಯಲ್ಲಿಯೇ ಮುಳುಗಿದ್ದು, ಬಡವರಿಗೆ ಸ್ಪಂದಿಸುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಪಾಲಿಕೆಯ ವಿಪಕ್ಷ ನಾಯಕ ಎ. ನಾಗರಾಜ್, ಸದಸ್ಯರುಗಳಾದ ಎ.ಬಿ. ರಹೀಂ, ಕೆ.ಚಮನ್‌ಸಾಬ್, ಜಾಕೀರ್ ಅಲಿ, ಮುಖಂಡರಾದ ಶಫೀಕ್ ಪಂಡಿತ್, ಉಮಾಶಂಕರ್, ಕಾರ್ಮಿಕ ಇಲಾಖೆಯ ಅಧಿಕಾರಿಗಳಾದ ವೀಣಾ ಎಸ್.ಆರ್. ಇಬ್ರಾಹಿಂ ಸಾಬ್, (3ನೇ ಪುಟಕ್ಕೆ)

# ಮಕ್ಕಳ ಬೆಳವಣಿಗೆಗೆ ವೃಕ್ಷಾಸನ ಅತಿ ಮುಖ್ಯ



ದಾವಣಗೆರೆ, ಆ.3- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ ನಡೆದ ಯೋಗ ತರಬೇತಿಯ ಶಿಬಿರದಲ್ಲಿ ಮಕ್ಕಳ ಬೆಳವಣಿಗೆಗೆ ಅತಿ ಮುಖ್ಯವಾದ ವೃಕ್ಷಾಸನವನ್ನು ಇಂದಿನ ಯೋಗ ತರಗತಿಯಲ್ಲಿ, ವಿವರಣೆಯೊಂದಿಗೆ ಕ್ರಮಬದ್ಧವಾಗಿ ಮಾಡುವುದರ ಬಗ್ಗೆ ತರಬೇತಿ ನೀಡಲಾಯಿತು.

ನಿನ್ನೆ ನಡೆದ ಅಭ್ಯಾಸದಲ್ಲಿ ಅತಿ ಹೆಚ್ಚಿನ ಸಮಯದವರೆಗೆ ಅಂದರೆ 10 ನಿಮಿಷ 44 ಸೆಕೆಂಡ್‌ಗಳ ಕಾಲ ವೃಕ್ಷಾಸನ ಮಾಡಿ, ಹರಿಹರದ ಕು. ಸೃಷ್ಟಿ ವಿಜೇತಳಾಗಿ ಹೊರಹೊಮ್ಮಿದ್ದಳು. ದ್ವಿತೀಯ ಸ್ಥಾನವನ್ನು ಕು. ಪೃಥ್ವಿ ಹಾಗೂ ಬಾಲಕರ ವಿಭಾಗದಲ್ಲಿ ಪ್ರಣವ್ 10 ನಿಮಿಷ 30 ಸೆಕೆಂಡ್ ವೃಕ್ಷಾಸನದಲ್ಲಿ ನಿಂತು ಪ್ರಥಮ ಹಾಗೂ ಚೇತನ್ ದ್ವಿತೀಯ ಸ್ಥಾನ ಪಡೆದರು.

ಯೋಗ ಶಿಕ್ಷಕ ತೀರ್ಥರಾಜ್ ಹೋಲೂರ್ ತರಬೇತಿ ನೀಡಿದರು. ಸಾರ್ವಜನಿಕರು ಪ್ರತಿ ಶುಕ್ರವಾರ ಯೋಗ ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಶಿಬಿರದಲ್ಲಿ ಯೋಗ, ಪ್ರಾಣಾಯಾಮ, ಧ್ಯಾನ ಒಳಗೊಂಡಿರುತ್ತದೆ.

ವಿವರಗಳಿಗೆ ಯೋಗಾಚಾರ್ಯ, ತೀರ್ಥರಾಜ್ ಹೋಲೂರ್ (98800 34643) ಅಥವಾ ಪವನ್ (8310640933) ಅವರನ್ನು ಸಂಪರ್ಕಿಸ ಬಹುದು.


# ಗ್ರಾಮೀಣ ಪ್ರದೇಶಕ್ಕೂ ಶುದ್ಧ ಕುಡಿಯುವ ನೀರು

## ಯೋಜನೆಗೆ ರಾಣೇಬೆನ್ನೂರು ಶಾಸಕ ಅರುಣಕುಮಾರ ಪೂಜಾರ್ ಚಾಲನೆ

ರಾಣೇಬೆನ್ನೂರು, ಆ.3- ಜಲಜೀವನ್ ಎನ್ನುವುದು ಗ್ರಾಮೀಣ ಪ್ರದೇಶದ ಜನರಿಗೂ ಕುಡಿಯಲು ಶುದ್ಧ ನೀರು ಕೊಡುವ ಪ್ರಧಾನ ಮಂತ್ರಿಗಳ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಇದನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದು ಶಾಸಕ ಅರುಣಕುಮಾರ ಪೂಜಾರ್ ತಿಳಿಸಿದ್ದಾರೆ.

ಗಂಗಾಪುರ, ಮೈದೂರು, ಗುಡಗೂರು, ಚೌಡಯ್ಯದಾನಾಪುರ ಗ್ರಾಮಗಳಲ್ಲಿ 5 ಕೋಟಿ ವೆಚ್ಚದ ಈ ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ, ರಾಜ್ಯ ಸರ್ಕಾರದ ಶೇ. 75, ಗ್ರಾ.ಪಂ. ಶೇ. 15 ರಷ್ಟು ಜನರಿಂದ ಶೇ. 10 ರಷ್ಟು




ಹಣ ಸಂಗ್ರಹಿಸಿ, ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದ್ದು, ಗ್ರಾಮೀಣ ಭಾಗದ ಜನರು ಯಾವುದೇ ತಂಟೆ ತಕರಾರುಗಳಿಲ್ಲದೆ ಸಹಕಾರ ನೀಡುವಂತೆ ಶಾಸಕರು ಮನವಿ ಮಾಡಿದರು.


ಮುಂದಿನ ಪೀಳಿಗೆಗೆ ನೀರಿನ ಸಂಪನ್ಮೂಲ ಕ್ರೋಢೀಕರಿಸಲು ಪ್ರತಿ ಗ್ರಾಮದಲ್ಲಿ ಅವಶ್ಯಕತೆಯ ಪ್ರಮಾಣ ಕಂಡುಕೊಳ್ಳಲು ಮೀಟರ್ ಅಳವಡಿಸಲಾಗುತ್ತದೆ.

ಇದಕ್ಕೆ ಗ್ರಾಮೀಣ ಜನರು ಈ ನೀರಿಗಾಗಿ ಹೆಚ್ಚು ಹಣ ಕೊಡುವ ಅವಶ್ಯಕತೆ ಬರಲಾರದು ಎಂದು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ವಿದ್ಯಾವತಿ ಹಳೇಗೌಡ ಹೇಳಿದರು.

ಪ್ರಾಧಿಕಾರದ ಅಧ್ಯಕ್ಷ ಕರಿಯಪ್ಪ ಪಾರೇರ, ಸದಸ್ಯ ಅಶೋಕ್ ಸಾವುಕಾರ, ಬಸಮ್ಮ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಅಭಿಯಂತರ ರಾಮಕೃಷ್ಣ ಇನ್ನಿತರರಿದ್ದರು.

# ಸಿಬಿಎಸ್‌ಇ 10ನೇ ತರಗತಿಯಲ್ಲಿ ಸಿದ್ಧಗಂಗಾ ಶಾಲೆಗೆ ಶೇ.100





ದಾವಣಗೆರೆ, ಆ.3 - 2020-21 ನೇ ಸಾಲಿನ ಸಿಬಿಎಸ್‌ಇ ಪಠ್ಯಕ್ರಮದ ಫಲಿತಾಂಶ ಪ್ರಕಟವಾಗಿದ್ದು, ನಗರದ ಸಿದ್ಧಗಂಗಾ ಶಾಲೆಗೆ 100 ಕ್ಕೆ 100 ಫಲಿತಾಂಶ ಬಂದಿದೆ.

ನಿರಂತರ ಮೌಲ್ಯಮಾಪನದನ್ವಯ ಫಲಿತಾಂಶ ನಿರ್ಧರಿಸಲಾಗಿದ್ದು, ಟೆಸ್ಟ್‌ಗಳ 10 ಅಂಕಗಳು ಅರ್ಧವಾರ್ಷಿಕ ಪರೀಕ್ಷೆಯ 30 ಅಂಕಗಳು, 3 ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳಿಂದ 40 ಅಂಕಗಳು ಮತ್ತು ಆಂತರಿಕ ಮೌಲ್ಯಮಾಪನದ 20 ಅಂಕಗಳು ಒಟ್ಟು 100 ಅಂಕಗಳ ಸೂತ್ರದಡಿ ಅಂಕಗಳನ್ನು ಕ್ರೋಢೀಕರಿಸಲಾಗಿದೆ. ಶಾಲಾ ಆರಂಭಿಕ ದಿನಗಳಲ್ಲಿ ನಿಧಾನಗತಿಯಲ್ಲಿರುವ ಅಭ್ಯಾಸ ಪ್ರಕ್ರಿಯೆ ಬೋರ್ಡ್ ಪರೀಕ್ಷೆಯು ಸನ್ನಿಹಿತವಾಗುತ್ತಿದ್ದಂತೆ ಶ್ರದ್ಧೆಯಿಂದ ಓದುವುದು ಮಕ್ಕಳ ರೂಢಿ. ಆದರೆ, ಈ ಬಾರಿ ರಾಷ್ಟ್ರಮಟ್ಟದ ಪರೀಕ್ಷೆಗಳಿಗೆ ಪೂರ್ಣ ಸಿದ್ಧತೆ ನಡೆಸಿದ್ದ ಹಲವಾರು ಮಕ್ಕಳಿಗೆ ಈ ಫಲಿತಾಂಶ ನಿರಾಸೆ ಮೂಡಿಸಿದೆ.

ಸಿದ್ಧಗಂಗಾ ಶಾಲೆಯ ಆರ್. ಪುನೀತ್ ಮತ್ತು ಪಿ.ತರುಣ್ ಶೇ.94.80 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮರಾಗಿದ್ದಾರೆ. ಅತ್ಯುತ್ತಮ ಶ್ರೇಣಿಯಲ್ಲಿ 10 ವಿದ್ಯಾರ್ಥಿಗಳು, ಪ್ರಥಮ ದರ್ಜೆಯಲ್ಲಿ 32 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕೋವಿಡ್ ಪರಿಸ್ಥಿತಿಯಲ್ಲಿ ಆನ್‌ಲೈನ್ ಪಾಠಗಳನ್ನು ಕೇಳಿ ಉತ್ತಮ ಫಲಿತಾಂಶ ನೀಡಿರುವ ಮಕ್ಕಳನ್ನು ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್ ಮತ್ತು ಉಪಪ್ರಾಂಶುಪಾಲರಾದ ಮಿಶೈಲ್ ಅನ್ವಿತಾ ಡಿ'ಸೌಜ, ಆಡಳಿತ ಮಂಡಳಿಯ ಹೇಮಂತ್, ಜಯಂತ್ ಮತ್ತು ಪ್ರಶಾಂತ್ ಅವರು ಅಭಿನಂದಿಸಿದ್ದಾರೆ.

# ಕದಳಿ ಕಮ್ಮಟದಿಂದ ಗುರುವಂದನೆ




ದಾವಣಗೆರೆ, ಆ.3- ಕದಳಿ ಮಹಿಳಾ ವೇದಿಕೆಯ ನಗರ ಘಟಕದ ವತಿಯಿಂದ 126 ನೇ ಕದಳಿ ಕಮ್ಮಟ ಹಾಗು ಹಡಪದ ಅಪ್ಪಣ್ಣನವರ ಜಯಂತಿಯನ್ನು ಕಳೆದ ವಾರ ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರ ಘಟಕದ ಅಧ್ಯಕ್ಷರಾದ ವಿನೋದ ಅಜಗಣ್ಣನವರ್ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಗುರು ಪೂರ್ಣಿಮೆಯ ಪ್ರಯುಕ್ತ ವಚನ ಗುರುಗಳಾದ ರೇವಣಸಿದ್ದಪ್ಪ ಅವರಿಗೆ ಗುರು ವಂದನೆ ಸಲ್ಲಿಸಲಾಯಿತು.

ಕದಳಿ ಮಹಿಳಾ ವೇದಿಕೆಯ ಗೌರವಾಧ್ಯಕ್ಷರಾದ ಶ್ರೀಮತಿ ಶಂಶಾದ್ ಬೇಗಂ, ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀಮತಿ ಆಶಾ ಎಂ. ಪಾಟೀಲ್, ಸಹ ಕಾರ್ಯದರ್ಶಿ ಶ್ರೀಮತಿ ಪೂರ್ಣಿಮಾ ಪ್ರಸನ್ನ ಮತ್ತು ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀಮತಿ ಮತಿಕುಸುಮಾ ಲೋಕೇಶ್ ಉಪಸ್ಥಿತರಿದ್ದರು.

ವಾಟ್ಸಾಪ್ ಮುಖೇನ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿ ಸೌಮ್ಯ ಸತೀಶ್ ಪ್ರಾರ್ಥಿಸಿದರು, ಶ್ರೀಮತಿ ಕೆ.ಆರ್. ವಸಂತ ಸ್ವಾಗತಿಸಿದರು. ಶ್ರೀಮತಿ ಮಮತಾ ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.

# ಚರ್ಮಕುಶಲ ಕರ್ಮಿಗಳಿಂದ ಅರ್ಜಿ

ದಾವಣಗೆರೆ, ಆ.3- ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಅರ್ಹ ಚರ್ಮ ಕುಶಲಕರ್ಮಿಗಳಿಂದ ವಿವಿಧ ಯೋಜನೆಗಳಿಗೆ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.

ಕೌಶಲ್ಯಾಭಿವೃದ್ಧಿ ಮತ್ತು ಆದಾಯ ಗಳಿಕೆಗಾಗಿ ತರಬೇತಿ ಶಿಬಿರ, ಚರ್ಮ ತಾಂತ್ರಿಕ ಉನ್ನತ ಶಿಕ್ಷಣಕ್ಕಾಗಿ ಡಿಪ್ಲೋಮಾ ಇನ್ ಲೆದರ್ ಮತ್ತು ಫ್ಯಾಷನ್ ಟೆಕ್ನಾಲಜಿ ವತಿಯಿಂದ ವಸತಿ ಕಾರ್ಯಾಗಾರ ಯೋಜನೆ, ಸ್ವಾವಲಂಬಿ ಮಾರಾಟ ಮಳಿಗೆ ಯೋಜನೆ, ದುಡಿಮೆ ಬಂಡವಾಳ ಯೋಜನೆ ಅಥವಾ ಮಹಿಳಾ ಕುಶಲಕರ್ಮಿಗಳಿಗೆ ಕಾಯಕ ಸ್ಫೂರ್ತಿ ಯೋಜನೆಯಡಿ ಸಹಾಯ ಧನ, ಪಾದುಕೆ ಕುಟೀರ ಯೋಜನೆ, ಸಂಚಾರಿ ವಾಹನ ಯೋಜನೆ, ಚರ್ಮ ಶಿಲ್ಪ ಯಂತ್ರಾಧಾರಿತ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಯೋಜನೆ, ನೇರಸಾಲ ಯೋಜನೆ, ಮಾರುಕಟ್ಟೆ ಸಹಾಯ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದು.

ಇದೇ ದಿನಾಂಕ 10 ರೊಳಗಾಗಿ https//lidkar.onlin ಮೂಲಕ ಅರ್ಜಿ ಅಪ್ ಲೋಡ್ ಮಾಡಬಹುದು. ಅರ್ಜಿಗಳನ್ನು ಲಿಂಕ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಜಿಲ್ಲಾ ಸಂಯೋಜಕರ ಕಛೇರಿಗೆ ಸಲ್ಲಿಸ ಬೇಕು. ವಿವರಕ್ಕೆ 97418 33307 ಅನ್ನು ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ಸಂಯೋಜಕರು ತಿಳಿಸಿದ್ದಾರೆ.

# ಸಿಬಿಎಸ್ಸಿ 10ನೇ ತರಗತಿ 99.04% ಫಲಿತಾಂಶ

**(1ನೇ ಪುಟದಿಂದ)** ವಿದ್ಯಾಲಯಗಳು ಹಾಗೂ ಸೆಂಟ್ರಲ್ ಟಿಬೆಟನ್ ಸ್ಕೂಲ್‌ಗಳು ಶೇ.100 ರಷ್ಟು ಫಲಿತಾಂಶ ಪಡೆದಿವೆ. ನವೋದಯ ವಿದ್ಯಾಲಯಗಳ ಫಲಿತಾಂಶ ಶೇ.99.99ರಷ್ಟಿದೆ.

# ನಿಧಾನ ಗತಿಯಲ್ಲಿ ಸ್ಮಾರ್ಟ್ ಸಿಟಿ ಕಾಮಗಾರಿ

ದಾವಣಗೆರೆ, ಆ.3- ಮಹಾನಗರ ಪಾಲಿಕೆಯ 15, 22, 44 ನೇ ವಾರ್ಡುಗಳಿಗೆ ಸಂಬಂಧಿಸಿದ ವರ್ತುಲ ರಸ್ತೆಯಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ಆರಂಭಿಸಿರುವ ಸಿಮೆಂಟ್ ರಸ್ತೆ ಕಾಮಗಾರಿಯು ಕಳೆದ 1 ವರ್ಷದಿಂದ ನಿಧಾನವಾಗಿ ಆಮೆಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಎಂದು ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ಮಾರ್ಟ್ ಸಿಟಿ ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಸಾರ್ವಜನಿಕರು ಮತ್ತು ಈ ಭಾಗದ ಸಣ್ಣ - ಪುಟ್ಟ ವ್ಯಾಪಾರಸ್ಥರಿಗೆ ತೊಂದರೆಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಕೇಳಿದರೆ ಬೇಜವಾಬ್ದಾರಿ ಉತ್ತರ ನೀಡುತ್ತಿದ್ದು, ಈ ರಸ್ತೆ ಕಾಮಗಾರಿ ಮತ್ತು ಪಕ್ಕ ಪೇವರ್ಸ್ ಕಾಮಗಾರಿಯನ್ನು ತಕ್ಷಣವೇ ಪೂರ್ಣಗೊಳಿಸಬೇಕೆಂದು ಅವರು ಸ್ಮಾರ್ಟ್ ಸಿಟಿ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

# ಎಸ್‌ಎಪಿ ತರಬೇತಿಗೆ ಅರ್ಜಿ

ದಾವಣಗೆರೆ, ಆ.3- ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯ ಹರಿಹರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎಸ್‌ಎಪಿನಲ್ಲಿ ಪ್ರೊಡಕ್ಷನ ಪ್ಲಾನಿಂಗ್, ಮೆಟೀರಿಯಲ್ ಮ್ಯಾನೇಜ್‌ಮೆಂಟ್, ಸೇಲ್ಸ್ ಮತ್ತು ಮಾಡ್ಯುಯಲ್‌ನಲ್ಲಿ ಅಲ್ಪಾವಧಿ ತರಬೇತಿಗಾಗಿ ಆಹ್ವಾನಿಸಲಾಗಿದೆ.

ಬಿಕಾಂ, ಎಂಕಾಂ, ಬಿಇ, ಎಂಟೆಕ್ ಮಾಡಿರುವ ಹಾಗೂ ಮಾಡುತ್ತಿರುವ ಅಭ್ಯರ್ಥಿಗಳು ಅರ್ಜಿಸಲ್ಲಿಸಬಹುದು. ಆಗಸ್ಟ್ 8 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ವಿವರಗಳಿಗೆ ಪ್ರಾಂಶುಪಾಲರು, ಜಿಟಿಟಿಸಿ, 22 ಸಿ ಮತ್ತು ಡಿ. ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಹರ್ಲಾಪುರ, ಕೆಎಸ್‌ಆರ್‌ಟಿಸಿ ಡಿಪೋ ಹತ್ತಿರ, ಹರಿಹರ, ಫೋನ್: 08192-243937, ಮೊ: 9916908111 / 8884488202 ಅನ್ನು ಸಂಪರ್ಕಿಸಬಹುದು.

# ಆಶುಭಾಷಣ ಸ್ಪರ್ಧೆ

ದಾವಣಗೆರೆ, ಆ.3- ಜಿಲ್ಲಾ ಕಾಂಗ್ರೆಸ್ ವತಿಯಿಂದ ಎನ್.ಎಸ್.ಯು.ಐ. ಸಹಯೋಗದೊಂದಿಗೆ ಕಾಲೇಜು ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ದಾರ್ಶನಿಕರು, ನಾಯಕರ ಕುರಿತು ಆಶುಭಾಷಣ ಈ ಸ್ಪರ್ಧೆ ಏರ್ಪಡಿಸಲಾಗಿದೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಇದೇ ದಿನಾಂಕ 7 ಹಾಗೂ 8 ರಂದು ಸ್ಪರ್ಧೆಗಳು ನಡೆಯಲಿವೆ. ವಿಜೇತರಿಗೆ 2001 ರೂ. ಪ್ರಥಮ, 1001 ರೂ., ದ್ವಿತೀಯ ಹಾಗೂ 501 ರೂ. ತೃತೀಯ ಬಹುಮಾನವನ್ನು ನೀಡಲಾಗುವುದು.

ವಿವರಕ್ಕೆ ಕೆ.ಎಲ್. ಹರೀಶ್ ಬಸಾಪುರ (99640 70830) ಅವರನ್ನು ಸಂಪರ್ಕಿಸುವಂತೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

# ಆತ್ಮ ವಿಶ್ವಾಸ, ಸದೃಢ ಮನಸ್ಸು ಯಶಸ್ಸಿನ ಆಯುಧಗಳು



ದಾವಣಗೆರೆ, ಆ.3- ಸ್ಪರ್ಧಾತ್ಮಕ ವ್ಯವಸ್ಥೆಯಲ್ಲಿ ಯಶಸ್ಸು ಪಡೆಯಲು ಜ್ಞಾನವೇ ಶಕ್ತಿಯಾಗಿದೆ. ಜ್ಞಾನ ಮತ್ತು ಕೌಶಲ್ಯ ಹೆಚ್ಚಿಸಿಕೊಂಡಾಗ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಆತ್ಮವಿಶ್ವಾಸ ಮತ್ತು ಸದೃಢ ಮನಸ್ಸು ಯಶಸ್ಸಿನ ಆಯುಧಗಳು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಅಭಿಪ್ರಾಯಪಟ್ಟರು.

ನಗರದ ಚೈತನ್ಯ ಹೈ-ಟೆಕ್ ವಾಣಿಜ್ಯ ಮತ್ತು ನಿರ್ವಹಣಾ ಪದವಿ ಕಾಲೇಜಿನಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಉದ್ಯೋಗ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಥೆ ಅಧ್ಯಕ್ಷ ಅಭಿಷೇಕ್ ಬೇತೂರು ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಪ್ರೀತಿ, ಐಸಿಐಸಿಐ ಕರ್ನಾಟಕ ರಿಕ್ರ್ಯೂಟ್‌ಮೆಂಟ್ ಮ್ಯಾನೇಜರ್ ಸುರೇಂದ್ರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಾರಾಂತ್ಯದ ಕರ್ಫ್ಯೂಗೆ ಸಮಿತಿ ಸಲಹೆ

**(1ನೇ ಪುಟದಿಂದ)** ಕೈಗೊಳ್ಳಿ, ಸೋಂಕಿನ ಪರೀಕ್ಷೆ ಹೆಚ್ಚಿಸಿ, ಜನದಟ್ಟಣೆ ಸೇರದಂತೆ ಕಠಿಣ ನಿಲುವು ತೆಗೆದುಕೊಳ್ಳಿ ಎಂದು ಹೇಳಿದೆ. 2ನೇ ಅಲೆಯಿಂದ ಆಗಿರುವ ಅನಾಹುತಗಳಿಂದ ನಾವು ಎಚ್ಚೆತ್ತುಕೊಳ್ಳುವ ಅಗತ್ಯವಿದೆ. ಮುಂಜಾಗ್ರತೆಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ, ಇದನ್ನು ನಿಯಂತ್ರಿಸಲು ಸಾಧ್ಯವಿದೆ.

ಸಾರ್ವಜನಿಕರು ಸೋಂಕಿನ ಬಗ್ಗೆ ಎಚ್ಚರ ತಪ್ಪಬಾರದು. ಅವರ ಸಹಕಾರ ಇದ್ದಲ್ಲಿ ಮಾತ್ರ ನಿಯಂತ್ರಣ ಸಾಧ್ಯ. ಇದರ ನಡುವೆ ಸರ್ಕಾರ ಏನೆಲ್ಲಾ ಕ್ರಮ ಕೈಗೊಳ್ಳಬೇಕೋ ಅದನ್ನು ನಿರ್ದಾಕ್ಷಿಣ್ಯವಾಗಿ ಕೈಗೊಳ್ಳಿ ಎಂದು ತಿಳಿಸಿದೆ.

# ಕಾರು ಬಹುಮಾನದ ಆಸೆ: ವಂಚನೆ

ದಾವಣಗೆರೆ, ಆ.3- ಕಾರು ಬಹುಮಾನವಾಗಿ ಬಂದಿರುವುದಾಗಿ ನಂಬಿಸಿ ನಿವೃತ್ತ ನೌಕರರೋರ್ವರಿಗೆ ಲಕ್ಷಕ್ಕೂ ಅಧಿಕ ಹಣವನ್ನು ಆನ್ ಲೈನ್ ಮುಖಾಂತರ ವಂಚಿಸಿರುವ ಘಟನೆ ನಡೆದಿದ್ದು, ಈ ಸಂಬಂಧ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರದ ಎಪಿಎಂಸಿ ಯಾರ್ಡ್ ಕ್ವಾಟ್ರಸ್‌ನ ಗಣೇಶ್ ಪೂಜಾರ್ ವಂಚನೆಗೊಳಗಾದ ನಿವೃತ್ತ ನೌಕರ.

ಕಳೆದ ಏಪ್ರಿಲ್ 5, 2021 ರಂದು ಅಂಚೆ ಮೂಲಕ ನ್ಯಾಪ್ ಟಾಲ್ ಕಂಪನಿಯಿಂದ ಒಂದು ಕೂಪನ್ ಕಾರ್ಡ್ ಬಂದಿದ್ದು, ಅದರಲ್ಲಿ ಈ ಕಂಪನಿಯಿಂದ ಕಾರು ಬಹುಮಾನವಾಗಿ ಬಂದಿದೆ. ನಿಮಗೆ ಕಾರು ಬೇಡವಾದರೇ ಅದರ ಬದಲಿಗೆ 14.80 ಲಕ್ಷ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುವುದಾಗಿ ತಿಳಿಸಲಾಗಿತ್ತು. ಅದರಲ್ಲಿದ್ದ ಮೊಬೈಲ್ ನಂಬರ್‌ಗೆ ಕರೆ ಮಾಡಿ ವಿಚಾರಿಸಿದಾಗ, ಅಪರಿಚಿತನು ಈ ಕಂಪನಿಯ ಅಧಿಕಾರಿ ಎಂದು ಹೇಳಿ ಕಾರು ಬಹುಮಾನವಾಗಿ ಬಂದಿದ್ದು, ಕಾರು ಬೇಕು ಎಂದರೇ ಕಂಪನಿಗೆ ಹಣ ಕಟ್ಟುವಂತೆ ನಂಬಿಸಿದನು. ಈತನ ಮಾತನ್ನೇ ನಂಬಿ ಮೊದಲಿಗೆ ಅಪರಿಚಿತ ತಿಳಿಸಿದಂತೆ ಹಂತ ಹಂತವಾಗಿ ಹಣ ಜಮೆ ಮಾಡಲಾಯಿತು.

ನಂತರ ಕರೆ ಮಾಡಿ ಬಹುಮಾನದ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಹಾಕಲು ಕೇಳಿದ್ದು, ಅದಕ್ಕೆ ಅವರು ಮ್ಯಾನೇಜರ್ ಗೆ ಕೇಳಿ ಹಣ ಹಾಕುವು ದಾಗಿ ನಂಬಿಸಿ ಪುನಃ ಹಣವನ್ನು ಹಾಕಿಸಿಕೊಂಡಿದ್ದು, ಈಗ ಕರೆ ಮಾಡಿದರೆ ಸಂಪರ್ಕಕ್ಕೆ ಸಿಗುತ್ತಿಲ್ಲ. ಕಾರು ಬಹುಮಾನದ ಆಸೆ ತೋರಿಸಿ 1,21,300 ರೂ. ವಂಚಿಸಿರುವುದಾಗಿ ಗಣೇಶ್ ಪೂಜಾರ್ ದೂರು ನೀಡಿದ್ದಾರೆ.

# ಭದ್ರಾ ಕಾಡಾ ಎಇಇ ನಾರಾಯಣ ಸ್ವಾಮಿ ನಿವೃತ್ತಿ: ಬೀಳ್ಕೊಡುಗೆ



ಮಲೇಬೆನ್ನೂರು, ಆ.3- ಭದ್ರಾ ಕಾಡಾ ಹರಿಹರ ಉಪವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಎಂ.ವಿ. ನಾರಾಯಣ ಸ್ವಾಮಿ ವಯೋ ನಿವೃತ್ತಿ ಹೊಂದಿದ್ದು, ಅವರನ್ನು ಬೀಳ್ಕೊಡಲಾಯಿತು.

ಭದ್ರಾ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ ಮಾತನಾಡಿದರು. ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಮಹಾಮಂಡಳದ ನಿರ್ದೇಶಕರಾದ ಶಿರಮಗೊಂಡನಹಳ್ಳಿಯ ಎ.ಬಿ. ಕರಿಬಸಪ್ಪ, ಎ. ಹನುಮಂತ ರೆಡ್ಡಿ, ವಾಸನ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್. ಮಂಜುನಾಥ್, ಕುಂಬಳೂರು ಸದಾಶಿವ ಮತ್ತಿತರರು ನಾರಾಯಣ ಸ್ವಾಮಿ ಅವರನ್ನು ಸನ್ಮಾನಿಸಿದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಓ.ಜಿ. ಕಾಲೋನಿ ಎ, ಬಿ, ಸಿ ಬ್ಲಾಕ್, ರಾಮನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಇಂದು ಸಂಪುಟ ವಿಸ್ತರಣೆ

**(1ನೇ ಪುಟದಿಂದ)** ಅನುಭವಿಗಳೂ ಬೇಕು ಹಾಗೂ ಹೊಸ ಚೈತನ್ಯವೂ ಬೇಕು. 2023ರ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳುವ ಜೊತೆಗೆ ಒಳ್ಳೆಯ ಆಡಳಿತ, ಸ್ವಚ್ಛ, ದಕ್ಷ ಜನಪರ ಆಡಳಿತದ ದೃಷ್ಟಿಯಿಂದ ಸಂಪುಟ ರಚಿಸಲಾಗುವುದು ಎಂದಿದ್ದಾರೆ. ಸಂಪುಟ ರಚಿಸುವಾಗ ಸಾಕಷ್ಟು ಪರ – ವಿರೋಧದ ಚರ್ಚೆ ಇದ್ದೇ ಇರುತ್ತದೆ. ಇದೆಲ್ಲ ಸಹಜ ಪ್ರಕ್ರಿಯೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಬಿಜೆಪಿಗೆ ವಲಸೆ ಬಂದವರು ಸಂಪುಟದಲ್ಲಿ ಇದ್ದೇ ಇರುತ್ತಾರೆ ಎಂದಿದ್ದಾರೆ.

ಸಂಪುಟ ವಿಸ್ತರಣೆ ಕುರಿತು ಚರ್ಚೆ ಮಾಡಲು ಬಹಳ ವಿಷಯ ಉಳಿದಿಲ್ಲ. ಸಂಪುಟ ವಿಸ್ತರಣೆ ಕುರಿತು ನಡ್ಡಾ ಅವರ ಜೊತೆ ಮತ್ತೆ ಚರ್ಚೆ ನಡೆಸುವುದಿಲ್ಲ. ಅಂತಿಮ ಪಟ್ಟಿ ವರಿಷ್ಠರು ಕಳಿಸಿದ ತಕ್ಷಣವೇ ರಾಜಭವನಕ್ಕೆ ಕಳಿಸುತ್ತೇನೆ. ನಾಳೆಯೇ ಪ್ರಮಾಣ ವಚನ ಸ್ವೀಕಾರಕ್ಕೆ ಸಿದ್ಧತೆ ಮಾಡಿಕೊಳ್ಳುತ್ತೇನೆ ಎಂದವರು ಹೇಳಿದ್ದಾರೆ.

# ಸರ್ಕಾರ ಬಡವರ ಹಿತವನ್ನು ರಕ್ಷಿಸಲಿ

**(1ನೇ ಪುಟದಿಂದ)** ರಾಜಶೇಖರ್ ಹಿರೇಮಠ್, ಮಂಜು, ಮಧು, ಮುಖಂಡರುಗಳಾದ ಹಾಲಸ್ವಾಮಿ, ಕರಿಬಸಪ್ಪ, ಅಬ್ದುಲ್ ಜಬ್ಬಾರ್, ವಾಸೀಮ್ ಚಾರ್ಲಿ ಮತ್ತಿತರರು ಉಪಸ್ಥಿತರಿದ್ದರು.

# ವರಿಷ್ಠರಿಗೂ-ಬೊಮ್ಮಾಯಿಗೂ ವಿಜಯೇಂದ್ರ ಬಿಸಿ ತುಪ್ಪ

**(1ನೇ ಪುಟದಿಂದ)** ಹಂತದಲ್ಲಿ 25 ಮಂದಿ ಪಟ್ಟಿ ಸಿದ್ಧಗೊಂಡಿದೆ.

ವರಿಷ್ಠರು ಇದಕ್ಕೆ ಹಸಿರು ನಿಶಾನೆ ನೀಡಿರುವುದಲ್ಲದೆ, ಬುಧವಾರವೇ ಹೊಸಬರು ಪ್ರಮಾಣ ವಚನ ಸ್ವೀಕರಿಸಲಿ ಎಂದು ಮುಖ್ಯಮಂತ್ರಿ ಅವರಿಗೆ ಸೂಚಿಸಿದ್ದಾರೆ.

ಆದರೆ, ವಿಜಯೇಂದ್ರ ಅವರನ್ನು ಮಂತ್ರಿ ಮಾಡದೇ ಸರ್ಕಾರ ಸುಸೂತ್ರವಾಗಿ ನಡೆಯದು. ಅವರಿಗೆ ಅವಕಾಶ ಮಾಡಿಕೊಡಿ. ನಾನು ಎಲ್ಲವನ್ನೂ ನೋಡಿಕೊಳ್ಳುತ್ತೇನೆ ಎಂದು ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಇದರ ಜೊತೆಗೆ ಮಾಜಿ ಸಚಿವ ಅಶೋಕ್ ಅವರನ್ನು ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಬಡ್ತಿ ಕೊಡಬೇಕು. ಇಲ್ಲದಿದ್ದರೆ, ನನ್ನ ಮಂತ್ರಿ ಮಂಡಲದಲ್ಲಿ ಯಾರಿಗೂ ಉಪ ಮುಖ್ಯಮಂತ್ರಿ ಕೊಡುವುದು ಬೇಡ. ಇದನ್ನು ಹೊರತು ಪಡಿಸಿ ನಿಮ್ಮ ಮುಂದೆ ಯಾವ ಬೇಡಿಕೆಯನ್ನೂ ಇಡುವುದಿಲ್ಲ ಎಂದು ಹೇಳಿದ್ದಾರೆ. ಮುಖ್ಯಮಂತ್ರಿ ಅವರ ಎರಡೂ ಬೇಡಿಕೆಗಳನ್ನೂ ರಾಷ್ಟ್ರೀಯ ಸಂಘಟನಾ ಕಾರ್ಯ ದರ್ಶಿ ಸಂತೋಷ್ ನಯವಾಗಿ ತಳ್ಳಿ ಹಾಕಿದ್ದಾರೆ.

ಒಕ್ಕಲಿಗ ಸಮುದಾಯದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ಬೇರೆಯವರಿಗೆ ಅವಕಾಶ ಮಾಡಿಕೊಡಲಾಗಿದೆ. ಮತ್ತೊಂದು ಸ್ಥಾನ ನೀಡುವುದು ಸರಿಯಲ್ಲ.

ಇನ್ನೂ ವಿಜಯೇಂದ್ರ ಅವರಿಗೆ ಮುಂದೆ ರಾಜಕೀಯ ಭವಿಷ್ಯವಿದೆ. ಅವರನ್ನು ತಕ್ಷಣಕ್ಕೆ ಸಂಪುಟದಲ್ಲಿ ಸೇರ್ಪಡೆ ಮಾಡಿಕೊಂಡರೆ ಬೇರೆ ರೀತಿಯ ಸಂದೇಶ ರವಾನೆಯಾಗಲಿದೆ. ಇದರ ಬದಲು ಯಡಿಯೂರಪ್ಪ ಅವರನ್ನೇ ಅಧಿಕಾರದಲ್ಲಿ ಮುಂದುವರೆಸಬಹುದಿತ್ತು. ನಿಮ್ಮನ್ನು ತರುವ ಅವಶ್ಯಕತೆ ಇರಲಿಲ್ಲ. ನೀವು ಕರ್ನಾಟಕಕ್ಕೆ ತೆರಳಿ. ನೀವು ಬೆಂಗಳೂರು ತಲುಪುತ್ತಿದ್ದಂತೆ ಸಚಿವರಾಗುವವರ ಪಟ್ಟಿ ನಿಮ್ಮ ಕೈ ಸೇರಲಿದೆ ಎಂದು ಸಂತೋಷ್ ಕಿವಿ ಮಾತು ಹೇಳಿದ್ದಾರೆ.

ವಿಜಯೇಂದ್ರ ಸೇರ್ಪಡೆಗೆ ಪಕ್ಷದ ಯಾವ ನಾಯಕರೂ ಆಸಕ್ತಿ ತೋರುವುದಿಲ್ಲ. ನೀವು ಯಡಿಯೂರಪ್ಪ ಅವರಿಗೆ ಮನವರಿಕೆ ಮಾಡಿಕೊಡಿ. ಮುಂದೆ ಅವರಿಗೆ ಅವಕಾಶ ದೊರೆಯುತ್ತದೆ ಎಂದಿದ್ದಾರೆ.

ಆದರೆ, ಬೊಮ್ಮಾಯಿ ಮಾತ್ರ ಇಂದು ಇಡೀ ದಿನ ಪಟ್ಟು ಬಿಡದೆ ಸಂತೋಷ್, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೇರಿದಂತೆ ಎಲ್ಲ ನಾಯಕರ ಮನವೊಲಿಸುವ ಪ್ರಯತ್ನ ನಡೆಸಿದ್ದಾರೆ.

ಸಂಪುಟ ರಚನೆ ಕಸರತ್ತಿಗೆ ದೆಹಲಿಗೆ ತೆರಳುವ ಮುನ್ನ ಯಡಿಯೂರಪ್ಪ ಭೇಟಿ ಮಾಡಿದ ಸಂದರ್ಭದಲ್ಲಿ ವಿಜಯೇಂದ್ರ ಮತ್ತು ಅಶೋಕ್ ಮಂತ್ರಿ ಮಂಡಲದಲ್ಲಿ ಅವಕಾಶ ಮಾಡಿಕೊಂಡೇ ಬರಬೇಕು ಎಂದು ತಾಕೀತು ಮಾಡಿದ್ದರಂತೆ.

ಇದಕ್ಕೆ ಬೊಮ್ಮಾಯಿ ಅವರು ತಲೆದೂಗಿದ್ದರು. ಆದರೆ, ದೆಹಲಿ ವರಿಷ್ಠರ ಬಳಿ ನಡೆದಿದ್ದೇ ಬೇರೆ. ಸಂಘದಿಂದ ವಿಜಯೇಂದ್ರ ಹೆಸರು ಶಿಫಾರಸ್ಸಾಗಿಲ್ಲ. ವರಿಷ್ಠರು ಅವರ ಬಗ್ಗೆ ಉತ್ಸಾಹ ತೋರುತ್ತಿಲ್ಲ.

ನಗರಕ್ಕೆ ಹೊರಡುವ ಮುನ್ನ ಮುಖ್ಯಮಂತ್ರಿ, ತಮ್ಮೆಲ್ಲ ಚಾಣಾಕ್ಷತನವನ್ನು ವರಿಷ್ಠರ ಮುಂದೆ ಪ್ರಯೋಗಿಸಿದ್ದಾರೆ. ಪಟ್ಟಿ ಬಂದ ನಂತರವೇ ಫಲಿತಾಂಶವೇನು ಎಂಬುದು ತಿಳಿಯುತ್ತದೆ.


**ನಟರಾಜ ಟ್ರ್ಯಾಕ್ಟರ್ಸ್, ದಾವಣಗೆರೆ**

**ಬೇಕಾಗಿದ್ದಾರೆ**



**ಸೋನಾಲಿಕಾ ಟ್ರ್ಯಾಕ್ಟರ್ ಶೋರೂಂ ಗೆ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ.**

ಹರಪನಹಳ್ಳಿ, ಚಿಗಟೇರಿ, ಅರಸೀಕೆರೆ ಮತ್ತು ಜಗಳೂರು, ಸೊಕ್ಕೆ ಹೋಬಳಿಗಳಲ್ಲಿ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಇನ್ಸೆಂಟಿವ್, TA & DA ಇರುತ್ತದೆ. ದ್ವಿಚಕ್ರ ವಾಹನ ಹೊಂದಿರಬೇಕು. ಆಸಕ್ತರು ದಿ : 10–08–2021 ರ ಬೆಳಿಗ್ಗೆ 11 ರಿಂದ ಸಂಜೆ 5 ರ ಒಳಗೆ ಸಂಪರ್ಕಿಸಿ: **ನಟರಾಜ ಟ್ರ್ಯಾಕ್ಟರ್ಸ್, ಜೈನ್ ಬಜಾಜ್ ಶೋರೂಂ ಎದುರು, ಪಿ.ಬಿ. ರಸ್ತೆ, ದಾವಣಗೆರೆ–06**



## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸೊತ್ತುಗಳ ಮಾಲೀಕರಾದ ಶ್ರೀ ಜಗದೀಶ್ ಜೆ.ಬಿನ್ ಲೇಟ್ ಶಿವಾನಂದಪ್ಪ ವಾಸ : ದಾವಣಗೆರೆ ಇವರು ಷೆಡ್ಯೂಲ್ ಸೊತ್ತುಗಳನ್ನು ಅಡಮಾನ ಮಾಡಿ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆ ಇವರಲ್ಲಿ ಸಾಲ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.


ಆದ್ದರಿಂದ, ಸದರಿ ಸೊತ್ತುಗಳ ಮೇಲೆ ಯಾವುದಾದರೂ ವ್ಯಕ್ತಿಗಳಿಗಾಗಲೀ, ಹಣಕಾಸು ಸಂಸ್ಥೆಗಳಿಗಾಗಲೀ, ಯಾವುದೇ ವಿಧದ ಹಕ್ಕಿದ್ದಲ್ಲಿ, ಹೊಣೆಗಾರಿಕೆಗಳಿದ್ದಲ್ಲಿ, ಪಾಲುದಾರಿಕೆ ಇದ್ದಲ್ಲಿ, ಅಡವಿನ ಅಧಿಕಾರವಿದ್ದಲ್ಲಿ ಅಥವಾ ಯಾವುದೇ ರೂಪದ ತಕರಾರುಗಳಿದ್ದಲ್ಲಿ ಅವರು ತಮ್ಮ ಆಕ್ಷೇಪಣೆಗಳನ್ನು ದೃಢೀಕರಿಸುವ ದಾಖಲೆಪತ್ರಗಳೊಂದಿಗೆ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆಗಾಗಲೀ ಅಥವಾ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆ ಪ್ರಕಟವಾದ ಏಳು (7) ದಿನಗಳೊಳಗಾಗಿ ಸಲ್ಲಿಸಬಹುದು.

**ಷೆಡ್ಯೂಲ್** : 1) ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ಸರ್ವೆ ನಂ. 244/1 ರಲ್ಲಿ ವಿಂಗಡಿಸಿರುವ ಸೈಟ್ ನಂ. 96, ಮಹಾನಗರಪಾಲಿಕೆ ಡೋರ್ ನಂ. 382/1ಎ-96ಎ, ಒಟ್ಟು ಅಳತೆ 35+58/2x45 ಅಡಿಯ ಪಶ್ಚಿಮ ಅಳತೆ 00+28/2x45 ಅಡಿ (630 ಚದರಡಿ) ಜಾಗದಲ್ಲಿ ಕಟ್ಟಿರುವ ಆರ್.ಸಿ.ಸಿ. ಮೇಲ್ಛಾವಣಿಯುಳ್ಳ ಮನೆ, ಮಹಾನಗರಪಾಲಿಕೆಯ ನಿಟುವಳ್ಳಿ ವಿಭಾಗದ ಶಕ್ತಿನಗರದ ಹಿಂಭಾಗದಲ್ಲಿರುವ ಸೊತ್ತಾಗಿದ್ದು ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ; ಚಂದ್ರಯ್ಯ ಇವರಿಗೆ ಸೇರಿದ ಸೈಟ್ ನಂ. 96 ರಲ್ಲಿ ಉಳಿದ ಸೊತ್ತು, ಪಶ್ಚಿಮಕ್ಕೆ : 40 ಅಡಿ ರಸ್ತೆ, ಉತ್ತರಕ್ಕೆ : ಸೈಟ್ ನಂ. 31, ದಕ್ಷಿಣಕ್ಕೆ : 30 ಅಡಿ ಅಗಲದ ರಸ್ತೆ. 2) ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ಸರ್ವೆ ನಂ. 246/2 ರಲ್ಲಿ ವಿಂಗಡಿಸಿರುವ ಸೈಟ್ ನಂ. 49, ಮಹಾನಗರ ಪಾಲಿಕೆ ಡೋರ್ ನಂ. 392/ಎ-49 ಅಳತೆ $\frac{30+35}{2}$ 1/2x50 ಅಡಿ (1637.5 ಚದರಡಿ)

ಉಳ್ಳ ಖಾಲಿ ನಿವೇಶನವು ದಾವಣಗೆರೆ ಮಹಾನಗರಪಾಲಿಕೆಯ ಆವರಗೆರೆ ವಿಭಾಗದಲ್ಲಿ ದಾಖಲಾಗಿದ್ದು ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : 30 ಅಡಿ ಅಗಲದ ರಸ್ತೆ, ಉತ್ತರಕ್ಕೆ : ಸೈಟ್ ನಂ. 50, ದಕ್ಷಿಣಕ್ಕೆ ಸೈಟ್ ನಂ. 48

**ದಾವಣಗೆರೆ** **ಶಾಮನೂರು ಪ್ರಕಾಶ್, ವಕೀಲರು, 2159/2, 4ನೇ ಮುಖ್ಯರಸ್ತೆ,**
**ದಿನಾಂಕ : 02.08.2021** **ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ. ಮೊ. : 9449512232**


# ಸಹೋದರಿಯರ ಹತ್ಯೆ ಪ್ರಕರಣ : ಬಂಧನ



ದಾವಣಗೆರೆ, ಆ.3- ಸಹೋದರಿಯರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಇಲ್ಲಿನ ವಿದ್ಯಾನಗರ ಪೊಲೀಸರು ಬಂಧಿಸಿದ್ದಾರೆ.

ಮಂಜುನಾಥ್ ಬಂಧಿತ ಆರೋಪಿ. ಈತ ಮೃತ ಗೌರಮ್ಮಳ ಪತಿಯಾಗಿದ್ದು, ಬೆಂಗಳೂರಿನಲ್ಲಿ ಪೊಲೀಸರು ಸೆರೆ ಹಿಡಿದಿದ್ದಾರೆ.

ಗೌರಮ್ಮ ಹಾಗೂ ರಾಧಕ್ಕ ಸ್ವಂತ ಅಕ್ಕ ತಂಗಿಯರು. ತಂದೆ ಲೋಕಪ್ಪ ಹಾಗೂ ಹಂಪಮ್ಮ ದಂಪತಿಯ ಐವರು ಪುತ್ರಿಯರಲ್ಲಿ ಇವರೂ ಇಬ್ಬರು. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದ ಗೌರಮ್ಮ ಹಾಗೂ ರಾಧಕ್ಕ ಇಬ್ಬರು ದಾವಣಗೆರೆಯ ಆಂಜನೇಯ ಕಾಟನ್ ಮಿಲ್ ನಲ್ಲಿ ಕೂಲಿ ಕೆಲಸ ಮಾಡುತ್ತಾ ಆಂಜನೇಯ ಕಾಟನ್ ಮಿಲ್ ಬಡಾವಣೆಯಲ್ಲಿ ವಾಸವಾಗಿದ್ದರು. ಆದರೆ ಕಳೆದ ಹತ್ತು ದಿನಗಳ ಹಿಂದೆ ಇವರಿಬ್ಬರನ್ನು ಹತ್ಯೆ ಮಾಡಲಾಗಿತ್ತು. ಮೃತದೇಹಗಳು ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದವು ಕೊಲೆ ನಂತರ ನಾಪತ್ತೆಯಾಗಿದ್ದ ಆರೋಪಿ ಮಂಜುನಾಥ್ ಮೇಲೆ ಶಂಕೆ ವ್ಯಕ್ತವಾಗಿತ್ತು. ಮೃತರ ಅಕ್ಕನ ಪುತ್ರಿ ಚಂದ್ರಮ್ಮ ಹೇಳಿದಾಗಲೇ ಹಂತಕನ ಸುಳಿವು ಸಿಕ್ಕಿತ್ತು.

ರಾಧಾಳದ್ದು ಹತ್ತು ವರ್ಷಗಳ ಹಿಂದೆಯೇ ವಿವಾಹ ವಿಚ್ಛೇದನವಾಗಿದೆ. ಅಂದಿನಿಂದ ಗೌರಮ್ಮಳೊಂದಿಗೆ ಜೀವನ ಸಾಗಿಸುತ್ತಿದ್ದಳು. ಆದರೆ ಸಹೋದರಿಯರ ಹತ್ಯೆ ಬಗ್ಗೆ ತನಿಖೆ ನಡೆಸಿದಾಗ, ಗೌರಮ್ಮ ಅಕ್ರಮ ಸಂಬಂಧ ಹೊಂದಿದ್ದಳು ಎಂದು ಪದೇ ಪದೇ ಮಂಜುನಾಥ್ ಜಗಳವಾಡುತ್ತಿದ್ದ ಎನ್ನಲಾಗಿದೆ.

# ಬಾಕಿ ವೇತನ ಪಾವತಿಸಲು ಒತ್ತಾಯ

**(1ನೇ ಪುಟದಿಂದ)** ಹೈಕೋರ್ಟ್ ಕಳೆದ ವರ್ಷ ಆದೇಶಿಸಿರುವ ತೀರ್ಪಿನಂತೆ ಇಲ್ಲಿಯೂ ಕನಿಷ್ಠ ವೇತನ ನೀಡಬೇಕು. ಕೊರೊನಾ ಪರಿಹಾರವಾಗಿ 5000 ಸಾವಿರ ರೂ. ಲಾಕ್‌ಡೌನ್ ಪರಿಹಾರ ನೀಡಬೇಕು. 60 ವರ್ಷ ಆದವರನ್ನೂ ಮುಂದುವರೆಯಲು ಅವಕಾಶ ನೀಡಬೇಕು.

ಮೇಲ್ವಿಚಾರಣೆಯನ್ನು ಎಸ್‌ಡಿಎಂಸಿ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ವಹಿಸದೇ ಶಿಕ್ಷಣ ಇಲಾಖೆಯ ಅಡಿಯಲ್ಲಿ ಆಗುವಂತೆ ನಿಯಮ ರೂಪಿಸಬೇಕು. ಮತ್ತು ಕೆಲಸವನ್ನು ಖಾಯಂಗೊಳಿಸಿ ಶಾಸನಾತ್ಮಕ ಸವಲತ್ತುಗಳನ್ನು ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಯನ್ನು ಪೂರೈಸಲು ಸರ್ಕಾರ ಮುಂದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ರುದ್ರಮ್ಮ ಬೆಳಲಗೆರೆ, ಜ್ಯೋತಿ ಲಕ್ಷ್ಮಿ, ಮಂಜುಳಾ, ಮಂಗಳಾ, ಗುತ್ತೆಮ್ಮ, ರಾಧಮ್ಮ, ಸಾಕಮ್ಮ, ರಮೇಶ್, ರೇಖಾ, ಕೊಟ್ರಮ್ಮ, ಸರಸ್ವತಿ, ಸುನೀತಾ, ಚೆನ್ನಮ್ಮ, ಗೌರಮ್ಮ, ಸಾಕಮ್ಮ, ಶಾಂತಮ್ಮ, ಜಯಮ್ಮ, ಶಂಷಾದ್ ಬಾನು, ಜಯಶ್ರೀ, ಸರೋಜ ಇನ್ನಿತರರಿದ್ದರು.

# ಶಾಸಕ ಮಾಡಾಳ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ದಾವಣಗೆರೆ, ಆ.3- ಬಸವರಾಜ ಬೊಮ್ಮಾಯಿ ಮಂತ್ರಿಮಂಡಲದಲ್ಲಿ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಕೃಷಿ ಖಾತೆ ನೀಡುವ ಮೂಲಕ ಸಂಪುಟ ದರ್ಜೆ ಸಚಿವರನ್ನಾಗಿ ಮಾಡುವಂತೆ ಕರ್ನಾಟಕ ಪ್ರದೇಶ ರೈತ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಅವರು ಒತ್ತಾಯಿಸಿದ್ದಾರೆ.

## ಪಡಿತರ ಚೀಟಿದಾರರು ಇ-ಕೆವೈಸಿ ಮಾಡಿಸಿಕೊಳ್ಳಲು ಸೂಚನೆ


ದಾವಣಗೆರೆ, ಆ.3- ನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಚಾಲ್ತಿಯಲ್ಲಿರುವ ಎಎವೈ, ಪಿಹೆಚ್‌ಹೆಚ್ (ಬಿಪಿಎಲ್) ಹಾಗೂ ಎನ್‌ಪಿಹೆಚ್‌ಹೆಚ್ (ಎಪಿಎಲ್) ಪಡಿತರ ಚೀಟಿದಾರರಿಗೆ ಇಂದಿನಿಂದ ಇದೇ ದಿನಾಂಕ 10 ರವರೆಗೆ ನ್ಯಾಯಬೆಲೆ ಅಂಗಡಿ ಕೇಂದ್ರಗಳಲ್ಲಿ ಪಡಿತರ ಚೀಟಿದಾರರ ಹೆಬ್ಬೆರಳು ಗುರುತು ಪಡೆದು, ಮರುನೋಂದಣಿ ಮಾಡುವ ಕಾರ್ಯವು ನಡೆಯುತ್ತಿದೆ. ಈವರೆಗೂ ಇ-ಕೆವೈಸಿ ಮಾಡಿಸಿಕೊಳ್ಳದೇ ಇರುವ ಪಡಿತರ ಚೀಟಿಯಲ್ಲಿನ ಪ್ರತಿಯೊಬ್ಬ ಸದಸ್ಯರು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿ ಕೇಂದ್ರಕ್ಕೆ ತೆರಳಿ, ಹೆಬ್ಬೆರಳಿನ ಗುರುತು ನೀಡಿ, ಉಚಿತವಾಗಿ ಇ-ಕೆವೈಸಿ, ಮಾಡಿಸಿಕೊಳ್ಳಬೇಕು ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಆಸ್ತಿ ತೆರಿಗೆ ರಿಯಾಯಿತಿ ವಿಸ್ತರಣೆ

ದಾವಣಗೆರೆ, ಆ. 3 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಮೇಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ಪಾವತಿ ಸಲು ಶೇ.5 ರಷ್ಟು ರಿಯಾಯಿತಿಯ ಕಾಲಾವಧಿಯನ್ನು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿರುವ ಕಾರಣ ಸರ್ಕಾರದ ಆದೇಶದಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ತಿಳಿಸಿದ್ದಾರೆ.


ಶ್ರೀ ಸರ್ವಶಕ್ತಿ ವೀರಾಂಜನೇಯ ಸ್ವಾಮಿ
ಜ್ಯೋತಿಷ್ಯ ಕೇಂದ್ರ

ಭಾರತದ ಪ್ರಖ್ಯಾತ ಜ್ಯೋತಿಷ್ಯರು
ಕೇರಳದ ಮೋಡಿ ಮಾಂತ್ರಿಕ ವಂಶಸ್ಥರು, ಕೇರಳದ ಮಹಾಜ್ಞಾನಿ
ಪ್ರಧಾನ ತಾಂತ್ರಿಕ್ ಪವನ್ ನಂಬೂತಿ ಗುರೂಜಿ



ಮನುಷ್ಯನ ಹುಟ್ಟು-ಸಾವು ನಡುವೆ ಬರುವ ಎಲ್ಲಾ ಸಂಕಷ್ಟ ಸಮಸ್ಯೆಗಳಿಗೆ
ಕೇರಳದ ಹಿರಿಯ ಮಾಂತ್ರಿಕ ಗುರುಗಳಿಂದ 'ಶಾಶ್ವತ ಪರಿಹಾರ'
ವಿಶೇಷ ಸೂಚನೆ : ಮಾಟ-ಮಂತ್ರ, ವಶೀಕರಣ, ದುಷ್ಟಶಕ್ತಿ ಇನ್ನೂ
ಯಾವುದೇ ಬಗೆಹರಿಯದ ಸಮಸ್ಯೆಗಳಿಗೆ ಗುರೂಜಿಯವರಿಂದ
100% ಪರಿಹಾರ ಶತಃಸಿದ್ಧ
ನಿಮ್ಮ ಸಮಸ್ಯೆಗಳನ್ನು ಗುಪ್ತವಾಗಿಡಲಾಗುವುದು, ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಕೂಡಲೇ ಕರೆ ಮಾಡಿ : 99002 57896
ದೂರದ ಊರಿನವರಿಗೆ ಫೋನಿನ ಮೂಲಕವೇ ಪರಿಹಾರ ಸಿಗಲಿದೆ
ದಾವಣಗೆರೆಗೆ ಮೊದಲ ಬಾರಿಗೆ ಆಗಮಿಸಿದ್ದಾರೆ
ವಿಳಾಸ : ಎಂಸಿಸಿ "ಎ" ಬ್ಲಾಕ್, ತೊಗಟವೀರ ಕಲ್ಯಾಣ ಮಂಟಪ, ದಾವಣಗೆರೆ.



Reg.No.: DR:DVG:RSR/25770/2000-01 EST : 04.08.2000


ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

"ಶಿವಗೌರಿ", ಮೊದಲನೇ ಮಹಡಿ,
ಶ್ರೀ ಭೂತಚೌಡೇಶ್ವರಿ ದೇವಸ್ಥಾನದ ಹತ್ತಿರ,
ರಿಂಗ್ ರಸ್ತೆ, ಶಾಂತಿನಗರ, ದಾವಣಗೆರೆ-6.
ಫೋ : 08192-355150, ಮೊ : 9844833876

22ನೇ ವರ್ಷಕ್ಕೆ ಪಾದಾರ್ಪಣೆ



ಜೆ. ಚೆಲುವಪ್ಪ
ಅಧ್ಯಕ್ಷರು



ಎನ್.ಜಿ. ಮೋಹನ್
ಉಪಾಧ್ಯಕ್ಷರು

ನಮ್ಮ ಸೊಸೈಟಿಯು ನಿಮ್ಮೆಲ್ಲರ ಸಹಕಾರದಿಂದ ದಿನಾಂಕ : 04-08-2021ಕ್ಕೆ 21 ವರ್ಷಗಳನ್ನು ಪೂರೈಸಿ, 22ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಇದರ ಯಶಸ್ಸಿಗೆ ಕಾರಣಕರ್ತರಾದ ನಮ್ಮ ಸಂಘದ ಸರ್ವಸದಸ್ಯರಿಗೂ, ಸಂಘದ ಮೇಲೆ ವಿಶ್ವಾಸವಿಟ್ಟು ಠೇವಣಿ ಮಾಡಿದ ಠೇವಣಿದಾರರಿಗೆ, ಮಾರ್ಗದರ್ಶನ ನೀಡಿದ ಸಹಕಾರ ಸಂಘಗಳ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ, ಲೆಕ್ಕ ಪರಿಶೋಧಕರಿಗೂ, ತೆರಿಗೆ ಸಲಹೆಗಾರರಿಗೂ, ಸಂಘದ ವ್ಯವಹಾರ ಮಾಡಲು ಸಹಕರಿಸಿದ ವಿವಿಧ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಗೂ, ಸಂಘದ ಸಿಬ್ಬಂದಿ ವರ್ಗದವರಿಗೂ, ಸಂಘದ ಕಾನೂನು ಸಲಹೆಗಾರರಿಗೂ, ಸಂಘದ ಕಟ್ಟಡ ಮೌಲ್ಯ ಮಾಪಕರಿಗೂ, ಪಿಗ್ಮಿ ಸಂಗ್ರಹಕಾರರಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂಘದ ಅಭಿವೃದ್ಧಿಗೆ ಕಾರಣರಾದವರೆಲ್ಲರಿಗೂ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.

ಸಂಘದ ಕಛೇರಿಯಲ್ಲಿ ಬೆಳಗ್ಗೆ 11-00 ಕ್ಕೆ ಶ್ರೀ ಲಕ್ಷ್ಮಿ, ಸರಸ್ವತಿ ಮತ್ತು ವಿಘ್ನೇಶ್ವರ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ.
ಮಾನ್ಯ ಸದಸ್ಯರು ಆಗಮಿಸಬೇಕೆಂದು ವಿನಂತಿಸಲಾಗಿದೆ.

ಮುಖ್ಯ ಅತಿಥಿಗಳು :

ಶ್ರೀ ಕೆ. ಮಹೇಶ್ವರಪ್ಪ, ಉಪನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ದಾವಣಗೆರೆ.
ಶ್ರೀ ಜಯಪ್ರಕಾಶ ಬಿ., ಉಪನಿಬಂಧಕರು, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ದಾವಣಗೆರೆ.
ಶ್ರೀಮತಿ ಮಂಜುಳಾ, ಸಹಾಯಕ ನಿಬಂಧಕರು, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ದಾವಣಗೆರೆ.
ಶ್ರೀ ರುದ್ರಪ್ಪ ಎನ್.ಜಿ., ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ.
ಶ್ರೀ ರಮೇಶ್ ಆರ್., ಅಧೀಕ್ಷಕರು, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ದಾವಣಗೆರೆ.
ಶ್ರೀ ತಾವರ್‍ಯನಾಯ್ಕ, ವ್ಯವಸ್ಥಾಪಕ ನಿರ್ದೇಶಕರು, ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ
ಶ್ರೀ ಮಲ್ಲಿಕಾರ್ಜುನ್, ವ್ಯವಸ್ಥಾಪಕರು, ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ

2020-21ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. /ಪಿ.ಯು.ಸಿ/ಪದವಿ/ಉನ್ನತ ಪದವಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿ ವರ್ಷ ಪ್ರತಿಭಾ ಪುರಸ್ಕಾರವನ್ನು ನೀಡುತ್ತಿದ್ದು, ಈ ಪ್ರಯೋಜನ ಪಡೆಯಲಿಚ್ಛಿಸುವವರು ಸಂಘದ ಕಛೇರಿಯಲ್ಲಿ ವಿಚಾರಿಸಲು ಕೋರಲಾಗಿದೆ.

ಸಂಘದ ಆರ್ಥಿಕ ಪ್ರಗತಿಯ ಪಕ್ಷಿನೋಟ

| ವಿವರಗಳು | 2017-2018 | 2018-2019 | 2019-2020 | 2020-2021 |
|---|---|---|---|---|
| ಸಂಘದ ಷೇರು ಬಂಡವಾಳ | 72,73,000-00 | 87,78,000-00 | 96,84,500-00 | 1,00,66,000-00 |
| ಸಂಘದ ಸದಸ್ಯರ ಸಂಖ್ಯೆ | 2142 | 2908 | 3106 | 3101 |
| ಠೇವಣಿಗಳು | 12,35,61,604-06 | 15,65,94,984-08 | 16,75,95,236-08 | 18,84,79,077-68 |
| ಸಾಲ ಮತ್ತು ಮುಂಗಡಗಳು | 10,36,33,195-00 | 12,64,40,409-00 | 15,55,80,428-00 | 16,39,73,788-00 |
| ಸಂಘದ ದುಡಿಯುವ ಬಂಡವಾಳ | 14,19,46,322-00 | 17,89,05,127-00 | 19,49,03,194-00 | 21,94,24,447-00 |
| ವಿನಿಯೋಗ (ಹೂಡಿಕೆಗಳು) | 3,96,14,792-00 | 4,75,69,504-00 | 3,19,32,036-00 | 4,98,85,549-00 |
| ಲಾಭ | 25,75,734-70 | 27,85,287-57 | 31,48,506-76 | 35,19,262-10 (ತಾತ್ಕಾಲಿಕ) |
| ಲಾಭಾಂಶ | 12% | 12% | 12% | 12% ಉದ್ದೇಶಿತ |

ಆಡಳಿತ ಮಂಡಳಿ ಸದಸ್ಯರು



ಜೆ.ಕೆ. ಶಿವಾನಂದ, ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ಹೆಚ್.ಬಿ. ಗೋಣಪ್ಪ, ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ಬಿ.ರಮೇಶ್(ಪಿ.ಜೆ), ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ವಿ. ಮಂಜುನಾಥ, ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ರಮೇಶ್ ಬಿ., ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಎನ್. ನಿಂಗಪ್ಪ, ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು



ಹೆಚ್.ಸಿ. ವಾಣಿ, ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಸುನಂದ ಮಂಜುನಾಥ, ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು
ಡಿ.ಬಿ. ಚಂದ್ರಪ್ಪ, ನಿರ್ದೇಶಕರು
ಎಸ್.ರವಿಸ್ವಾಮಿ, ವಿಶೇಷ ಆಹ್ವಾನಿತರು
ಶ್ರೀಮತಿ ವಂದನಾ ಹೆಚ್.ಎಂ., ವಿಶೇಷ ಆಹ್ವಾನಿತರು
ದಯಾನಂದ ದೊಡ್ಡಮನಿ, ಕಾರ್ಯದರ್ಶಿ ಪ್ರ.ಪ್ರ.

ಠೇವಣಿಗಳ ಮೇಲಿನ ಬಡ್ಡಿದರ

| | | | |
|---|---|---|---|
| 15 ದಿನದಿಂದ 45 ದಿನಗಳವರೆಗೆ | 5% | 1 ವರ್ಷದ ಮೇಲ್ಪಟ್ಟು 2 ವರ್ಷಗಳವರೆಗೆ | 8.5% |
| 46 ದಿನದಿಂದ 90 ದಿನಗಳವರೆಗೆ | 6% | 2 ವರ್ಷದ ಮೇಲ್ಪಟ್ಟು 3 ವರ್ಷಗಳವರೆಗೆ | 9.5% |
| 91 ದಿನದಿಂದ 180 ದಿನಗಳವರೆಗೆ | 7% | 3 ವರ್ಷದ ಮೇಲ್ಪಟ್ಟು | 10.5% |

ಹಿರಿಯ ನಾಗರೀಕರಿಗೆ ಹೆಚ್ಚುವರಿಯಾಗಿ 0.5% ಬಡ್ಡಿ ನೀಡಲಾಗುವುದು





ಹುಟ್ಟುಹಬ್ಬದ ಶುಭಾಶಯಗಳು



ದಾವಣಗೆರೆ ಜಿಲ್ಲಾ ವಾಲ್ಮೀಕಿ
ನಾಯಕ ಯುವ ಘಟಕದ ಉಪಾಧ್ಯಕ್ಷರೂ,
ಆತ್ಮೀಯರೂ ಆದ
ಶ್ರೀ ಆರ್.ಎಸ್. ರಾಕೇಶ್
ಅವರಿಗೆ ಹುಟ್ಟು ಹಬ್ಬದ
ಹಾರ್ದಿಕ ಶುಭಾಶಯಗಳು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte